ಆ) ಕೈಗಾರಿಕೆಗಳು ರೋಗಗ್ರಸ್ಥವಾಗಲು ಕಾರಣಗಳು ಕೆಳಕಂಡಂತಿವೆ:

1. ಉದಾರೀಕರಣ
2. ಜಾಗತೀಕರಣ
3. ಕೈಗಾರಿಕಾ ಹಿಂಜರಿತ
4. ದುಡಿಮೆ ಬಂಡವಾಳದ ಕೊರತೆ
5. ವಿಳಂಬ ಪಾವತಿ
6. ಮಾಲೀಕತ್ವದ ತಗಾದೆಗಳು
7. ವಿದ್ಯುತ್ ಸಮಸ್ಯೆ
8. ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಹಿಂಜರಿತ

ಇ) ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗುತ್ತಿದೆ:

1. ಘಟಕದ ಪುನಶ್ಚೇತನ ಯೋಜನಾ ವೆಚ್ಚ. ಶೇ:25 ರಷ್ಟು ಹಣವನ್ನು ರೂ. 2.50 ಲಕ್ಷಗಳ ಮಿತಿಗೊಳಪಟ್ಟು ಬಡ್ಡಿ ರಹಿತ ಬೀಜಧನ ಸಾಲದ ರೂಪದಲ್ಲಿ ನೀಡುವುದು.

2. ಕೆಪಿಟಿಸಿಎಲ್ ಹಾಗೂ ಇತರೆ ಪ್ರಾಂತೀಯ ವಿದ್ಯುತ್ ಸರಬರಾಜು ಕಂಪನಿಗಳು ಘಟಕವು ಮುಚ್ಚಿದ ಅವಧಿಯಲ್ಲಿ ನಿಗದಿತ ದರ ಹಾಗೂ ಬೇಡಿಕೆ ದರ ಪಾವತಿಯಿಂದ ವಿನಾಯಿತಿ ನೀಡುವುದು.

3. ವಿದ್ಯುತ್ ಬಾಕಿ ದರಗಳನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಶೆ. 6ರ ಬಡ್ಡಿ ದರದಲ್ಲಿ ಪಾವತಿಸಲು ಅವಕಾಶ ನೀಡುವುದು.

4. ಘಟಕವು ಮುಚ್ಚಿದ ಅವಧಿಗೆ ಬಡ್ಡಿ ಪಾವತಿಯಿಂದ ವಿನಾಯಿತಿ ನೀಡುವುದು.

5. ಕೆಐಎಡಿಬಿ:ಕೆ ಎಸ್ ಎಸ್ ಐಡಿಸಿ: ಕಿಯೋನಿಕ್ಸ್ ಗಳ ಬಾಕಿ ಸಾಲ ಪಾವತಿಯನ್ನು ಒಂದು ವರ್ಷಗಳವರೆಗೆ ಮುಂದೂಡಿ ಅದನ್ನು ನಾಲ್ಕು ವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ ನೀಡುವುದು.

6. ಅಭಿವೃದ್ಧಿ ಸಾಲ ಮರು ಪಾವತಿಯನ್ನು ಕೈಗಾರಿಕೆಯು ಪುನಶ್ಚೇತನಗೊಳಿಸಿದ ನಂತರ ಮೂರು ವರ್ಷದ ಅವಧಿಯಲ್ಲಿ ಬಡ್ಡಿ ಇಲ್ಲದೆ ಪಾವತಿಸಲು ಅವಕಾಶ ನೀಡುವುದು.

7. ವಾಣಿಜ್ಯ ತೆರಿಗೆ ಬಾಕಿಯನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಶೇ. 6ರ ಬಡ್ಡಿ ದರದಲ್ಲಿ ಮರುಪಾವತಿಸಲು ಅವಕಾಶ ನೀಡುವುದು.

8. ಘಟಕವು ಪುನಶ್ಚೇತನಗೊಂಡ ನಂತರ ಮುಂದೆ ಪಾವತಿಸಬೇಕಾದ ವಾಣಿಜ್ಯ ತೆರಿಗೆಯನ್ನು ಬಡ್ಡಿ ಇಲ್ಲದೇ ಮೂರು ವರ್ಷಗಳವರೆಗೆ ಮುಂದೂಡಲು ಅವಕಾಶ ನೀಡಿ ಈ ಮೊತ್ತವನ್ನು ಮೂರು ವಾರ್ಷಿಕ ಕಂತುಗಳಲ್ಲಿ ಪ್ರಸ್ತುತ ತೆರಿಗೆಯೊಡನೆ ಪಾವತಿಸುವುದು.

ಬಿಜಾಪುರ ಜಿಲ್ಲೆಯಲ್ಲಿ ಬರುವ ಸಣ್ಣ ಪ್ರಮಾಣದ ಕೈಗಾರಿಕೆಗಳು

3122 (3786) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮೇಗೌಡ (ತಿಕೋಟ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಬರುವ ಘಟಕಗಳು ಯಾವುವು?

ಆ) ಬಿಜಾಪುರ ಜಿಲ್ಲೆಯಲ್ಲಿ ಬರುವ ಸಣ್ಣ ಪ್ರಮಾಣದ ಕೈಗಾರಿಕೆಯ ಘಟಕಗಳು ಎಷ್ಟು; ಅವುಗಳಲ್ಲಿ ನೋಂದಾಯಿತ ಹಾಗು ನೋಂದಾಯಿಸದೇ ಇರುವ ಘಟಕಗಳು ಎಷ್ಟು?

ಇ) ನೋಂದಣಿ ಆಗದೇ ಇರುವ ಘಟಕಗಳನ್ನು ನೋಂದಾಯಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು):

ಅ) ಯಂತ್ರೋಪಕರಣ ಮತ್ತು ಘಟಕವನ್ನೊಳಗೊಂಡಂತೆ ರೂ. 100.00 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಬಂಡವಾಳ ಹೂಡಿರುವ ಕೈಗಾರಿಕಾ ಘಟಕಗಳನ್ನು ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳೆಂದು ಪರಿಗಣಿಸಲಾಗುವುದು.

ಆ) ಬಿಜಾಪುರ ಜಿಲ್ಲೆಯಲ್ಲಿ 5124 ಘಟಕಗಳು ನೋಂದಣಿಯಾಗಿರುತ್ತದೆ. ನೋಂದಾಯಿಸದೇ ಇರುವ ಘಟಕಗಳ ಮಾಹಿತಿ ಲಭ್ಯವಿರುವುದಿಲ್ಲ.

ಇ) ಅಂತಹ ಕೈಗಾರಿಕೆಗಳನ್ನು ನೋಂದಣಿ ಮಾಡುವುದು ಕಡ್ಡಾಯವಾಗಿರುವುದಿಲ್ಲ ಆದಾಗ್ಯೂ ನೋಂದಾಯಿಸದೇ ಇರುವ ಘಟಕಗಳ ಕುರಿತಂತೆ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಜನಸಂಖ್ಯೆಗನುಗುಣವಾಗಿ ಮೀಸಲಾತಿ

3125 (3441) : ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿಗಳನ್ನು ಅವರವರ ಜನ ಸಮುದಾಯಗಳ ಜನಸಂಖ್ಯೆಗನುಗುಣವಾಗಿ ವರ್ಗೀಕರಿಸಿ ರಾಜಕೀಯ, ಆಡಳಿತ, ಶಿಕ್ಷಣ, ಆರ್ಥಿಕ ಸೌಲಭ್ಯಗಳನ್ನು ಪಂಜಾಬ, ಹರಿಯಾಣ, ಉತ್ತರ ಕನ್ನಡ ಮತ್ತು ಆಂಧ್ರ ಸರ್ಕಾರಗಳು ನೀಡಿ ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸಿ ಸಂವಿಧಾನ ದತ್ತವಾದ ಸಾಮಾಜಿಕ ನ್ಯಾಯ ಜಾರಿಯಲ್ಲಿ ತಂದಿರುವ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ?

ಆ) ಇದೇ ರೀತಿಯ ಒಳಮೀಸಲಾತಿಗೆ ಆಗ್ರಹಿಸಿ, ಕರ್ನಾಟಕದ ಮಾದಿಗ ಜನಾಂಗದ ಜನತೆ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಮೂಲಕ ಕಳೆದ 5 ವರ್ಷಗಳಿಂದ ಹೋರಾಟ ಮಾಡುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಕರ್ನಾಟಕ ಸರ್ಕಾರ ಕೂಡ ಪರಿಶಿಷ್ಟರ ಜನಸಂಖ್ಯೆಗನುಗುಣವಾಗಿ ಮಿಸಲಾತಿ ತರಲು ಉದ್ದೇಶಿಸಿದೆಯೇ? ಈ ದಿಸೆಯಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹೌದು

ಆ) ಈ ಬಗ್ಗೆ ಕೋರಿಕೆ, ಸದರಿ ಜನಾಂಗದಿಂದ ಬಂದಿದೆ.

ಇ) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಪರಿಶಿಷ್ಟ ಜಾತಿಗಳಿಗೆ ಒದಗಿಸಲಾದ ಶೇಕಡ 15ರ ಮೀಸಲಾತಿ ಪ್ರಮಾಣವನ್ನು ಪರಿಶಿಷ್ಟ ಉಪಜಾತಿಗಳ ಒಳ ಮೀಸಲಾತಿ ನಿರ್ಧರಿಸುವ ಹಾಗು ಶಿಫಾರಸ್ಸು ಉಪಬಂಧಗಳು ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧಿನಿಯಮಗಳಲ್ಲಿರುವುದಿಲ್ಲ.

ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತರ ಇಲಾಖೆಯ ಫಲಾನುಭವಿಗಳು

3127 (3451) : ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪೂರ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?